ಕರ್ನಾಟಕ ಸರಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ
Office of the Deputy Commissioner, Vijayapur
ದರ್ಬಾರ ಹಾಲ್, ವಿಜಯಪುರ 586101
Fax: 08352 - 251289, 256666
☎ 08352 - 251289, 250479,
email: deo.bijapur@gmail.com

ಸಂಖ್ಯೆ: ನಂ/ಸಿಎಎಲ್/ಸಿಆರ್- /2018-19 ದಿನಾಂಕ: 01/06/2018

## -:: ಪತ್ರಿಕಾ ಪ್ರಕಟಣೆ ::-

ಈ ಮೂಲಕ ಜಿಲ್ಲೆಯ ಯಾವತ್ತೂ ಸಾರ್ವಜನಿಕರಿಗೆ ತಿಳಿಯಪಡಿಸುತ್ತಿರುವುದೇನೆಂದರೆ, 2018 ನೇ ಸಾಲಿನ ಮುಂಗಾರು ಮಳೆ ಪ್ರಾರಂಭಗೊಂಡಿದ್ದು, ಭಾರತೀಯ ಹವಾಮಾನ ಇಲಾಖೆಯು ನೀಡಲಾದ ಪೂರ್ವ ಮಾಹಿತಿಯಂತೆ ಮಳೆಯ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಹೆಚ್ಚು ಕಡಿಮೆಯಾಗುವ ಸಾಧ್ಯತೆಗಳಿದ್ದು, ಒಮ್ಮೆ ಒಂದು ಪ್ರದೇಶದಲ್ಲಿ 3-4 ಇಂಚು ಮಳೆ ಬಿದ್ದರೆ ಇನ್ನೊಂದು ಕಡೆ 1-2 ಇಂಚು ಮಾತ್ರ ಬೀಳುತ್ತದೆ. ಇದಕ್ಕೆಲ್ಲಾ ಹವಾಮಾನ ವೈಪರಿತ್ಯವೇ ಕಾರಣ ಎಂಬುದು ಎಲ್ಲರಿಗೂ ತಿಳಿದಿರುವ ಅಂಶವಾಗಿದೆ. ಈ ಕಾರಣ ಸಾರ್ವಜನಿಕರು ಈ ಬಗ್ಗೆ ಗಮನಹರಿಸಿ ಮಳೆ, ಸಿಡಿಲು, ಬಿರುಗಾಳಿ, ಪ್ರವಾಹ ಹಾಗೂ ಇನ್ನಿತರೆ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ತಮ್ಮ ಜೀವ, ಪ್ರಾಣಿಗಳ ರಕ್ಷಣೆ . ಆಸ್ತಿ ಪಾಸ್ತಿಗಳ ರಕ್ಷಣೆಯಲ್ಲಿ ಮುಂಜಾಗ್ರತೆ ವಹಿಸುವುದು. ಹಾಗೂ ಜಿಲ್ಲಾ ಆಡಳಿತಕ್ಕೆ ತುರ್ತಾಗಿ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡುವುದು.

ಪರಿಸ್ಥಿತಿ ಕೈ ಮೀರಿದಾಗ ನೆರೆ ಮತ್ತು ಅತಿವೃಷ್ಟಿಯಾದಾಗ ಸಾರ್ವಜನಿಕರ ಜೀವ ಮತ್ತು ಪ್ರಾಣಿಗಳ ಜೀವ ರಕ್ಷಣೆ ಹಾಗೂ ಆಸ್ತಿ ಪಾಸ್ತಿಗಳ ರಕ್ಷಣೆಯನ್ನು ಸರ್ಕಾರದ ಪರವಾಗಿ ಜಿಲ್ಲಾ ಆಡಳಿತವು ಕೈಕೊಳ್ಳುತ್ತದೆ. ಇದಕ್ಕಾಗಿ ಪ್ರತಿ ತಾಲೂಕಾ ತಹಶೀಲ್ದಾರ ಕಚೇರಿಯ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ವಿಪತ್ತು ನಿರ್ವಹಣಾ ಘಟಕದಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿದ್ದು, ಅದು ದಿನದ 24 ಗಂಟೆಗಳ ಕಾಲ ಕಾರ್ಯ ನಿರ್ವಹಿಸುತ್ತದೆ. ಕಾರಣ ತಮ್ಮ ಗ್ರಾಮದಲ್ಲಿ ಯಾವುದೇ ರೀತಿಯ ಘಟನೆಗಳು ನೈಸರ್ಗಿಕ ವಿಕೋಪದಿಂದ ಉಂಟಾದಲ್ಲಿ ತಕ್ಷಣದಲ್ಲಿ ಪ್ರಥಮವಾಗಿ ತಮ್ಮ ತಾಲೂಕಿನ ತಹಶೀಲ್ದಾರರ ಕಛೇರಿಗೆ, ಪರ್ಯಾಯವಾಗಿ ಜಿಲ್ಲಾ ವಿಪತ್ತು ನಿರ್ವಹಣೆ ಘಟಕಕ್ಕೆ ಮತ್ತು ಪೊಲೀಸ್ ಕಂಟ್ರೋಲ್ ರೂಮಿಗೂ ಸಹ ದೂರವಾಣಿ ಮುಖಾಂತರ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ದೂರವಾಣಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | |
|---|---|
| 1) ಜಿಲ್ಲಾಧಿಕಾರಿಗಳ ಕಛೇರಿಯ ವಿಪತ್ತು ನಿರ್ವಹಣಾ ಘಟಕ | : 08352- 221261 |
| 2) ಪೊಲೀಸ್ ಕಂಟ್ರೋಲ್ ರೂಂ | : 08352-250844 |
| 3) ತಹಶೀಲ್ದಾರ ವಿಜಾಪೂರ | : 08352-278707 |
| 4) ತಹಶೀಲ್ದಾರ ಬ.ಬಾಗೇವಾಡಿ | : 08358-245226 |
| 5) ತಹಶೀಲ್ದಾರ ಮುದ್ದೇಬಿಹಾಳ | : 08356-220227 |
| 6) ತಹಶೀಲ್ದಾರ ಇಂಡಿ | : 08359-225020 |
| 7) ತಹಶೀಲ್ದಾರ ಸಿಂದಗಿ | : 08488-221235 |

ಜಿಲ್ಲಾ ಆಡಳಿತವು ಎಂತಹುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧವಾಗಿದ್ದು, ಸಾರ್ವಜನಿಕರು ಈ ದಿಶೆಯಲ್ಲಿ ಸೂಕ್ತ ಸಹಕಾರ ನೀಡಲು ಕೋರಿದೆ.

ಜಿಲ್ಲಾಧಿಕಾರಿಗಳು,
ವಿಜಯಪುರ

ಗೆ,
1. ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪೂರ
2/- ಸರಕಾರಿ ಸುದ್ಧಿಯಾಗಿರುವುದರಿಂದ ಎಲ್ಲ ದಿನ ಪತ್ರಿಕೆಗಳಲ್ಲಿ ಪುಕ್ಕಟೆಯಾಗಿ ಪ್ರಕಟಿಸುವುದು.
2. ಜಿಲ್ಲಾ ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗ, ಜಿಲ್ಲಾ ಪಂಚಾಯತ ವಿಜಯಪುರ ಇವರಿಗೆ.
2/-ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕೃತ ವೆಬ್ ಸೈಟ್ ನಲ್ಲಿ ಸದರಿ ವಿಪತ್ತು ನಿರ್ವಹಣಾ ಘಟಕದ ಸಹಾಯವಾಣಿಕೇಂದ್ರದ ದೂರವಾಣಿ ಸಂಖ್ಯೆಯನ್ನು ಅಳವಡಿಸುವುದು.

Scanned by CamScanner